ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

ಸಂಖ್ಯೆ: ಎಂಪಿ/ಆರ್‌ಎಸ್/ಆರ್‌ಸಿ/30/2014

17ನೇ ಜುಲೈ 2014

**ಸನ್ಮಾನ್ಯ ಸಿದ್ದರಾಮಯ್ಯರವರೇ,**

ಪ್ರಸ್ತುತ ಬೆಂಗಳೂರಿನ ಆಡಳಿತ ಪರಿಸ್ಥಿತಿಯ ಕುರಿತಂತೆ ಹೆಚ್ಚಿನ ಕಾಳಜಿಯಿಂದ ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ.

ನಗರದ ಸ್ವಚ್ಛತೆ ಮತ್ತು ನಾಗರಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವ ತ್ಯಾಜ್ಯ ನಿರ್ವಹಣೆಯ ವೈಫಲ್ಯದಿಂದ ಹಿಡಿದು, ನಗರದಲ್ಲಿ ಮಹಿಳೆಯರ, ವೃದ್ಧರ ಮತ್ತು ಮಕ್ಕಳ ವಿಚಾರದಲ್ಲಿ ಹದಗೆಟ್ಟಿರುವ ಕಾನೂನು ಸುವ್ಯವಸ್ಥೆಯವರೆಗೆ - ಬೆಂಗಳೂರು ನಗರವು ಹಲವಾರು ವರ್ಷಗಳಿಂದ ಅವ್ಯವಸ್ಥೆಯ ಆಗರವಾಗಿ ಪರಿವರ್ತಿತಗೊಂಡಿದ್ದು, ಎಲ್ಲ ರಂಗಗಳ ಬಿಕ್ಕಟ್ಟು ನಿರ್ವಹಣೆಯಲ್ಲಿ ಸೋತು ಅವನತಿಯತ್ತ ಸಾಗುತ್ತಿದೆ.

ಉತ್ತಮ ಆಡಳಿತದ ನಿಮ್ಮ ಭರವಸೆಯನ್ನು ನಂಬಿ ಜನರು ನಿಮ್ಮ ಸರ್ಕಾರವನ್ನು ಆಯ್ಕೆಮಾಡಿದರು. ಆದರೆ, ಸುಶಾಸನದ ಕೊರತೆಯ ಜೊತೆಗೆ ದುರಾಡಳಿತದಿಂದ ಬೆಂಗಳೂರು ನರಳುತ್ತಿರುವುದಕ್ಕೆ ಸಾಕಷ್ಟು ನಿದರ್ಶನಗಳು ಮೇಲಿಂದ ಮೇಲೆ ಎದುರಾಗುತ್ತಿದೆ. ತೀರ ಇತ್ತೀಚಿನ ಅಸಮರ್ಪಕ ತ್ಯಾಜ್ಯ ನಿರ್ವಹಣೆಯ ಅವಾಂತರಗಳನ್ನು ನಿಭಾಯಿಸುವಷ್ಟರಲ್ಲಿಯೇ ಈಗ ಸಿಎಜಿ ವರದಿ ಪ್ರಕಟಗೊಂಡಿದ್ದು ಬಿಬಿಎಂಪಿಯಲ್ಲಿ ನೂರಾರು ಕೋಟಿ ರೂಪಾಯಿಗಳ ಅವ್ಯವಹಾರಗಳನ್ನು ಬಯಲುಮಾಡಿದೆ. ಸೂಕ್ತ ಯೋಜನೆಯ (ಮಾಸ್ಟರ್ ಪ್ಲಾನ್) ಕೊರತೆಯಿಂದ ಹೇಗೆ ಬಿಬಿಎಂಪಿ, ಕೇಂದ್ರದ ಜವಾಹರ್ ಲಾಲ್ ನೆಹರು ನರ್ಮ್ ಯೋಜನೆಯಡಿಯಲ್ಲಿ 287 ಕೋಟಿಯಷ್ಟು ಅನುದಾನವನ್ನು ಪೋಲು ಮಾಡಿತು ಎಂಬುದನ್ನು ಎತ್ತಿ ತೋರಿಸಿದೆ.

ನಿಮಗೆ ತಿಳಿದೇ ಇರುವಂತೆ, ನಮ್ಮ ನಗರದ ಸರ್ವಾಂಗೀಣ ಅಭಿವೃದ್ಧಿಗೆ ದೂರದೃಷ್ಟಿಯುಳ್ಳ ಒಂದು ಸಮಗ್ರ ಯೋಜನಾ ನಕ್ಷೆಯನ್ನು (ಮಾಸ್ಟರ್ ಪ್ಲಾನ್) ರೂಪಿಸುವಂತೆ ನಿಮ್ಮ ಸರ್ಕಾರವನ್ನು ನಾನು ಒತ್ತಾಯಿಸುತ್ತಲೇ ಇದ್ದೇನೆ. ನಗರದ ಅಭಿವೃದ್ಧಿಯ ಕುರಿತಾಗಿ ಸಮಗ್ರ ಯೋಜನೆಯ ಕೊರತೆಯೇ ನೇರವಾಗಿ, ಭ್ರಷ್ಟಾಚಾರ, ಆಡಳಿತದಲ್ಲಿ ಪಾರದರ್ಶಕತೆಯಿಲ್ಲದಿರುವುದು, ತಾತ್ಕಲಿಕ ಗುತ್ತಿಗೆ ವ್ಯವಸ್ಥೆ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಸಂಪೂರ್ಣ ಪ್ರಾಬಲ್ಯಕ್ಕೆ ಕಾರಣವಾಗಿದೆ. ಪರಿಸ್ಥಿತಿಗಳನ್ನು ನಿಯಂತ್ರಿಸಲು ಮಧ್ಯಪ್ರವೇಶಿಸುವಂತೆ ನಿಮ್ಮ ಸರ್ಕಾರವನ್ನು ಮೇಲಿಂದ ಮೇಲೆ ಒತ್ತಾಯಿಸುತ್ತಿದ್ದರೂ, ರಾಜ್ಯದ ಚುನಾವಣೆಯ ಸಂದರ್ಭದಲ್ಲಿ ಜನರಿಗೆ ಉತ್ತಮ ಸರ್ಕಾರ ನೀಡುವ ನಿಮ್ಮದೇ ಭರವಸೆಗಳ ನಡುವೆಯೂ, ನಿಮ್ಮ ಸರ್ಕಾರ ವಿಫಲವಾಗುತ್ತಿದೆ.

...2..

11ನೇ ಮಹಡಿ, ಸರ್ ಎಂ ವಿಶ್ವೇಶ್ವರಯ್ಯ ಕೇಂದ್ರ, ದೊಡ್ಡ ಕಟ್ಟಡ, ಡಾ: ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು-560 001
ದೂರವಾಣಿ: 080-22863600 / 22863680

ಯಾವುದೇ ಸರಿಯಾದ ಚಿಂತನೆಯುಳ್ಳ ನಾಗರಿಕ, ಜನಸೇವಕ ಅಥವಾ ಜನಪ್ರತಿನಿಧಿಗೆ ಸಹಜವಾಗಿ ತಿಳಿಯುವ ವಿಷಯವೆಂದರೆ, ನಗರದ ಸಂಚಾರ, ತ್ಯಾಜ್ಯ ನಿರ್ವಹಣೆ, ಕಾನೂನು ಸುವ್ಯವಸ್ಥೆ, ಭದ್ರತೆ, ಗುತ್ತಿಗೆಗಳಲ್ಲಿನ ಭ್ರಷ್ಟಾಚಾರ ಪ್ರಕರಣಗಳು ಇತ್ಯಾದಿಯಾಗಿ ಬೆಂಗಳೂರಿನ ಅಸಂಖ್ಯಾತ ಸಮಸ್ಯೆಗಳ ಮೂಲವಿರುವುದು ಅತ್ಯಂತ ಮೂಲಭೂತ ವಿಷಯಗಳಾದ ಆಡಳಿತ, ಯೋಜನೆ ಮತ್ತು ಸಾರ್ವಜನಿಕ ಸೇವೆಗಳನ್ನು ನೀಡುವ ಸಾಂಸ್ಥಿಕ ಇಲಾಖೆಗಳ ಸಮರ್ಪಕ ನಿರ್ವಹಣೆಯ ಕೊರತೆಯಲ್ಲಿ ಎಂಬುದು. ಈ ಸಮಸ್ಯೆಗಳ ಪರಿಹಾರಕ್ಕೆ ಯಾವ ಪವಾಡಗಳ ಅವಶ್ಯಕತೆಯೂ ಇಲ್ಲ, ಬದಲಿಗೆ ಬೇಕಿರುವುದು, ನಗರವನ್ನು ಸಂರಕ್ಷಿಸಿ ಪೋಷಿಸುವ ಆಸಕ್ತಿಯಿರುವ ನಾಯಕತ್ವ ಮಾತ್ರ.

ಈ ಹಿಂದೆ ಹಲವಾರು ಬಾರಿ ನಾನು ಒತ್ತಾಯಿಸಿರುವಂತೆ ಸೂಕ್ತ ಸಮಾಲೋಚನಾ ಪ್ರಕ್ರಿಯೆಯಿಂದ ರೂಪುಗೊಂಡ, ಬಹು ವರ್ಷಗಳ, ಒಂದು ಸಮರ್ಪಕವಾದ ಸಮಗ್ರ ಯೋಜನೆಗೆ ಸರ್ಕಾರ ಶ್ರಮಿಸಬೇಕು. ಸಂವಿಧಾನದ ಆಶಯವನ್ನು ಅಕ್ಷರಶಃ ಪಾಲಿಸುತ್ತಾ, ನಾಗರಿಕ ಗುಂಪುಗಳು, ನಿವಾಸಿ ಕಲ್ಯಾಣ ಸಂಘಗಳು ಮತ್ತು ನಿಜವಾದ ನಗರ ಯೋಜನಾ ಪರಿಣಿತರನ್ನೊಳಗೊಂಡ ಮೆಟ್ರೊಪಾಲಿಟನ್ ಪ್ಲಾನಿಂಗ್ ಕಮಿಟಿಯನ್ನು (ಎಂಪಿಸಿ) ಪುನಾರಚನೆಯೂ ಸೇರಿದಂತೆ ಆಡಳಿತ ಸುಧಾರಣೆಗಳು ಮತ್ತು ನಗರಕ್ಕೆ ಒಂದು ಶಾಸನಬದ್ಧ ಯೋಜನೆಯನ್ನು ನಿರೂಪಿಸುವ ಮೂಲಭೂತ ಉದ್ದೇಶವನ್ನು ಈ ಸಮಗ್ರ ಯೋಜನೆ ಸಾಧಿಸಬೇಕು.

**ಬೆಂಗಳೂರಿಗೆ ಒಂದು ಬಹು ವರ್ಷಗಳ ಸಮಗ್ರ ಯೋಜನೆಯನ್ನು ಸರ್ಕಾರ ಪರಿಗಣಿಸಬಹುದು**

ಪ್ರತಿಯೊಂದು ಆಧುನಿಕ ನಗರವೂ ಕೂಡ, ಅದು ನ್ಯೂಯಾರ್ಕ್, ಲಂಡನ್, ಬಾರ್ಸಿಲೋನಾ ಯಾವುದೇ ಆಗಿರಲಿ, ತನ್ನ ಅಭಿವೃದ್ಧಿಯನ್ನು ಸಾಧಿಸುವಂತೆ ಮುಂದಿನ ಅನೇಕ ವರ್ಷಗಳಿಗಾಗುವ ಯೋಜನೆಗಳನ್ನು ಹೊಂದಿರುತ್ತದೆ. 2010ರಲ್ಲಿ ಸಾವಿರಾರು ಪ್ರಜ್ಞಾವಂತ ನಾಗರಿಕರು ಜೊತೆಗೂಡಿ " ಪ್ಲಾನ್ ಬೆಂಗಳೂರು - 2020" ಕರಡನ್ನು ರೂಪಿಸಿದರು - ಬೆಂಗಳೂರಿನ ಎಲ್ಲ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಿದ ಸಲಹೆಗಳ ಒಂದು ಸಮಗ್ರ ಕಾರ್ಯಯೋಜನಾ ನಕ್ಷೆ ಇದಾಗಿತ್ತು. ನಗರ ಮತ್ತು ನಾಗರಿಕರ ಅನೇಕ ಸಮಸ್ಯೆಗಳಿಗೆ ಕಾರಣವಾಗಿರುವ ತಾತ್ಕಾಲಿಕ ವಿಧಾನಗಳಿಂದ ಉಂಟಾಗುವ ಅಪಾಯಗಳು, ದುಂದುವೆಚ್ಚಗಳನ್ನು ಎತ್ತಿ ತೋರಿಸುವ ಜೊತೆಗೆ ಆಡಳಿತ ಸುಧಾರಣಾ ಕ್ರಮಗಳು ಮತ್ತು ಯೋಜನೆಗಳ ಅಗತ್ಯವನ್ನು ಈ ವರದಿ ಪ್ರತಿಪಾದಿಸಿತ್ತು. ಹಿಂದಿನ ಸರ್ಕಾರ ಈ ವರದಿಯನ್ನು ಒಪ್ಪಿದರೂ ಅದರ ಯಾವ ಶಿಫಾರಸುಗಳೂ ಕೂಡ ಅನುಷ್ಠಾನವಾಗಲಿಲ್ಲ.

ಒಂದು ವೇಳೆ, ಬೆಂಗಳೂರಿಗಾಗಿ ನೂತನ ಸಮಗ್ರ ಯೋಜನೆಯನ್ನು ರೂಪಿಸಲು ತಮ್ಮ ಸರ್ಕಾರ ನಿರ್ಧರಿಸಿದ್ದಲ್ಲಿ, ಅದು ಅಗತ್ಯವಾಗಿ ಮಾಡಬಹುದು. ಆದರೆ, ಅಂತಹ ಯಾವುದೇ ಯೋಜನೆಯು ತುರ್ತು ಆಡಳಿತ ಸುಧಾರಣಾ ಕ್ರಮಗಳನ್ನು ಒತ್ತಾಯಿಸುವುದರ ಜೊತೆಗೆ ನಗರದ ಅಭಿವೃದ್ಧಿಗೆ ಯೋಜನಾಬದ್ಧವಾಗಿ, ನಾಗರಿಕರ ಆಕಾಂಕ್ಷೆಗಳನ್ನೊಳಗೊಂಡ

ಸಮಗ್ರ ಕಾರ್ಯವಿಧಾನಗಳ ಅಂಶಗಳನ್ನು ಖಚಿತವಾಗಿ ಒಳಗೊಂಡಿರಬೇಕಾದದ್ದು ಅತ್ಯವಶ್ಯ. ಇದು ಏಕೆ ಮುಖ್ಯವಾಗುತ್ತದೆಯೆಂದರೆ, ನಗರ ಅಭಿವೃದ್ಧಿಗೆ ಯೋಜನೆಗಳಿಗಾಗಲಿ, ದೂರದೃಷ್ಟಿಯ ಕಲ್ಪನೆಗಳಿಗಾಗಲಿ ಇಲ್ಲಿ ಕೊರತೆಯಿಲ್ಲ, ಕೊರತೆಯಿರುವುದು ಮೌನ ನಾಗರಿಕರ ಮತ್ತಿ ನಿವಾಸಿ ಅಭಿವೃದ್ಧಿ ಸಂಘಟನೆಗಳ ಒತ್ತಾಸೆಗೆ ದನಿನೀಡುವ ಒಂದು ಪಾರದರ್ಶಕ ಮತ್ತು ಪ್ರಾಮಾಣಿಕ ಸಮಗ್ರ ಯೋಜನೆಯದ್ದು. ಯಾವುದೇ ವಾಸ್ತವ ಅನುಭವವಾಗಲಿ, ಬದ್ಧತೆಯಾಗಲಿ ಇಲ್ಲದ, ಮಾಧ್ಯಮಗಳಲ್ಲಿ ಮೆರೆಯುವ, ನಗರಾಭಿವೃದ್ಧಿ ಯೋಜನಾ ವಿಷಯದಲ್ಲಿ ಸ್ವಯಂಘೋಷಿತ ತಜ್ಞರು ಮತ್ತು ಸಂಸ್ಥೆಗಳ ದೆಸೆಯಿಂದಾಗಿ ಈಗೆಲ್ಲ ನಾಗರಿಕರ ಮತ್ತು ನಿವಾಸಿ ಕಲ್ಯಾಣ ಸಂಘಗಳ ಅಭಿಪ್ರಾಯಗಳನ್ನು ದಮನ ಮಾಡಲಾಗುತ್ತಿದೆ. ಪಟ್ಟಭದ್ರ ಹಿತಾಸಕ್ತಿಗಳಿಗೆ ಅನುಕೂಲಕರವಾಗಿದ್ದು, ನಗರ ಮತ್ತು ನಾಗರಿಕರ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾಗಿದೆಯೆಂದು ನೂರಾರು ನಾಗರಿಕರು ಮತ್ತು ನಿವಾಸಿ ಸಂಘಗಳು ಕೆಐಜಿ ೨೦೨೦ ವರದಿಗೆ ವಿರೋಧ ವ್ಯಕ್ತಪಡಿಸಿದ್ದರೂ, ಆ ವರದಿಯನ್ನು ಅಂಗೀಕರಿಸುವಂತೆ ಸರ್ಕಾರದ ಮೇಲೆ ಒತ್ತಡ ಹಾಕಲಾದ ರೀತಿಯಿಂದ ಇದು ಸಾಬೀತಾಗಿದೆ. ನಾಗರಿಕರ ಆಕ್ಷೇಪಗಳನ್ನು ಸರ್ಕಾರ ಪರಿಗಣಿಸಬೇಕು.

ನಮ್ಮ ನಗರಕ್ಕಾಗಿ ನೂತನ ಸಮಗ್ರ ಯೋಜನೆಯನ್ನು ರೂಪಿಸಲು ತಾವು ಈಗ ಮುಂದಾಗಬೇಕೆಂದು ಈ ಮೂಲಕ ಒತ್ತಾಯಿಸುತ್ತಿದ್ದೇನೆ. ತಮ್ಮ ಉತ್ತಮ ಆಡಳಿತ ಮತ್ತು ಆಡಳಿತಾತ್ಮಕ ಸುಧಾರಣೆಗಳ ವಾಗ್ದಾನವನ್ನು ಸಾಕಾರಗೊಳಿಸಬೇಕೆಂದು ಮತ್ತೊಮ್ಮೆ ತಮ್ಮನ್ನು ಆಗ್ರಹಿಸುತ್ತಿದ್ದೇನೆ. ನಮ್ಮ ನಗರದ ಅವನತಿಯನ್ನು ತಡೆಯುವ ತುರ್ತು ಅಗತ್ಯವಿದೆ ಮತ್ತು ಈ ನಗರ ಮತ್ತು ನಾಗರಿಕರು ಅರ್ಹರಾಗಿದ್ದೂ ವಂಚಿತರಾಗಿರುವ ಅಭಿವೃದ್ಧಿಯ ನೂತನ ಅಧ್ಯಾಯಕ್ಕೆ ಪಾತ್ರರಾಗಬೇಕಿದೆ. ಮತ್ತಷ್ಟು ಬೆಂಗಳೂರು ನಗರವನ್ನು ಹಾಳಮಾಡಲು ಅವಕಾಶ ನೀಡದೆ, ನಿವಾಸಿ ಕಲ್ಯಾಣ ಸಂಸ್ಥೆಗಳು ಮತ್ತು ಇತರ ಬಾಧ್ಯಸ್ತ ವರ್ಗಗಳೊಂದಿಗೆ ತೊಡಗಿಸಿಕೊಂಡು, ಎಂಪಿಸಿ ಕಾಯ್ದೆಯ ಮೂಲಭೂತ ಲೋಪಗಳನ್ನು ಸರಿಪಡಿಸುವ ಜೊತೆಗೆ ನಗರಕ್ಕಾಗಿ ನೂತನ ಬಹು-ವರ್ಷೀಯ ಶಾಸನಬದ್ಧ ಸಮಗ್ರ ಯೋಜನೆಯನ್ನು ಅಂತಿಮಗೊಳಿಸಲು ತಮ್ಮ ಸರ್ಕಾರ ಈ ಕೂಡಲೆ ಕಾರ್ಯಪ್ರವೃತ್ತವಾಗಬೇಕು.

ಶೀಘ್ರದಲ್ಲೆ ಈ ಕುರಿತಂತೆ ತಮ್ಮ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ನಿರೀಕ್ಷಿಸುತ್ತಿದ್ದೇನೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ದರಾಮಯ್ಯರವರು**
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ಬೆಂಗಳೂರು